Register Number

# Language — Part I — KANNADA — Paper II

Time Allowed : 3 Hours ] [ Maximum Marks : 80

I. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ : $5 \times 6 = 30$

1) ಸುಬ್ಬಣ್ಣ ಹುಟ್ಟಿದಾಗ ನಾರಾಯಣ ಶಾಸ್ತ್ರಿಗಳಿಗೆ ಸಂತೋಷವಾಗಲು ಕಾರಣವೇನು ?

2) ಸಂಗೀತ ಕಲಿತು ಮಹಾರಾಜರಿಂದ ಖಿಲ್ಲತ್ತು ಪಡೆಯಬೇಕೆಂಬ ಗೀಳು ಸುಬ್ಬಣ್ಣನವರಲ್ಲಿ ಹುಟ್ಟಿಕೊಳ್ಳಲು ಕಾರಣವೇನು ?

3) ಸುಬ್ಬಣ್ಣ ಸಂಗೀತಾಭ್ಯಾಸಕ್ಕೆ ಹೋಗುತ್ತಿದ್ದ ವಿಷಯವನ್ನು ಮನೆಯಲ್ಲಿ ಹೇಳದಿರುವುದಕ್ಕೆ ಕಾರಣವೇನು ?

4) ನೀಲಾಸಾನಿ ತನ್ನ ಮನೆಯಲ್ಲಿ ಸುಬ್ಬಣ್ಣನಿಗೆ ಮಾಡಿದ ವ್ಯವಸ್ಥೆಯೇನು ?

5) ಸುಬ್ಬಣ್ಣ ಹಾಗೂ ಅವನ ತಾಯಿಯ ಮಧ್ಯೆ ಮಾನಸಿಕ ಅಂತರ ಉಂಟಾಗಲು ಕಾರಣವೇನು ?

6) ಲಲಿತೆ ಗಂಡನನ್ನು ಹರಿದ್ವಾರಕ್ಕೆ ಹೋಗಲು ಒಪ್ಪಿಸಿದ್ದೇಕೆ ?

7) ಸುಬ್ಬಣ್ಣ ಕಲ್ಕತ್ತಾವನ್ನು ಬಿಡಲು ಕಾರಣವೇನು ?

II. ನಿಮ್ಮ ಊರಿನ ಬಗ್ಗೆ ವಿವರಿಸುತ್ತಾ ನಿಮ್ಮ ಮಿತ್ರನಿಗೊಂದು ಪತ್ರ ಬರೆಯಿರಿ. $1 \times 10 = 10$

ಅಥವಾ

ನಿಮ್ಮ ಊರಿನಲ್ಲಿರುವ ಕಾಗದದ ಕಾರ್ಖಾನೆಗೆ ಭೇಟಿ ನೀಡಲು ಅವಕಾಶ ನೀಡಬೇಕೆಂದು ಕೇಳಿಕೊಳ್ಳುತ್ತಾ ಕಾರ್ಖಾನೆಯ ಮೇನೇಜರರಿಗೆ ಒಂದು ಮನವಿ ಪತ್ರ ಬರೆಯಿರಿ.

III. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದರ ಬಗ್ಗೆ ಪ್ರಬಂಧ ಬರೆಯಿರಿ : $1 \times 15 = 15$

1) ಇಂದಿನ ಭಾರತ

2) ಸುನಾಮಿ - ಪ್ರಕೃತಿ ವಿಕೋಪದ ಪರಿಣಾಮ

3) ಭಾರತ - ಪಾಕಿಸ್ತಾನದ ಮೈತ್ರಿ

IV. ಈ ಪದ್ಯಗಳ ಸಾರಾಂಶವನ್ನು ಬರೆಯಿರಿ : $2 \times 5 = 10$

1) ಮನುಜಕುಲವೊಂದೊಬ್ಬ ನಿನ್ನೊಬ್ಬನಂತಿಲ್ಲ ।
ತನುವಂಗಗಳೊಂದು, ರೂಪಗುಣ ಬೇರೆ ॥
ಮನದೊಳೊಬ್ಬೊಬ್ಬನೊಂದೊಂದು ಪ್ರಪಂಚವಿಂ ।
ತನುವೇಕದೊಳ್ ಬಹುಳ - ಮಂಕುತಿಮ್ಮ ॥

[ Turn over

2) ಮರವನೇರಿದ ಮರ್ಕಟನಂತೆ ಹಲವು ಕೊಂಬೆಗೆ ಹಾಯುತ್ತಲಿದ್ದೇನೆ.
ಬೆಂದ ಮನವ ನಾನೆಂತು ನಂಬುವೆನಯ್ಯಾ !
ಎಂತು ನೆಚ್ಚುವೆನಯ್ಯಾ !
ಎನ್ನ ತಂದೆ ಕೂಡಲ ಸಂಗಮದೇವನಲ್ಲಿಗೆ ಹೋಗಲೀಯದಯ್ಯಾ.

V. a) ಈ ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರು ಸಾಲುಗಳಿಗೆ ಮೀರದಂತೆ ವಿವರಿಸಿ : $1 \times 5 = 5$

1) ಮಾತು ಮನೆ ಕೆಡಿಸಿತು. ತೂತು ಒಲೆ ಕೆಡಿಸಿತು.

2) ಉತ್ತು ಬಾಳುವವನ ಬದುಕು ಎತ್ತಲೂ ಲೇಸು.

3) ದುಡ್ಡಿದ್ದವನೇ ದೊಡ್ಡಪ್ಪ.

b) ಕನ್ನಡಕ್ಕೆ ಭಾಷಾಂತರಿಸಿ : 10

More people live in villages than in towns and cities in our country. But many of the villagers are poor. They live in mud houses. There are not enough wells in many villages. So, people do not get water to drink. Things are slowly changing now. Government authorities have started a country-wide plan to provide drinking water to all villages.